# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 1360
ಸದಸ್ಯರ ಹೆಸರು : ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ : 09.03.2022
ಉತ್ತರಿಸುವ ಸಚಿವರು : ಮಾನ್ಯ ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.

| | | |
|---|---|---|
| (ಅ) | ರಾಜ್ಯದಲ್ಲಿ ಸಣ್ಣ ವಿಮಾನ ನಿಲ್ದಾಣಗಳನ್ನು ನಿರ್ಮಿಸಲು ಗುರುತಿಸಿರುವ ಸ್ಥಳಗಳು ಯಾವುವು; ಅವುಗಳಲ್ಲಿ ಎಷ್ಟು ಸ್ಥಳಗಳಲ್ಲಿ ಈಗಾಗಲೇ ನಿಲ್ದಾಣ ಸ್ಥಾಪಿಸಲಾಗಿದೆ ಮತ್ತು ಉಳಿದ ವಿಮಾನ ನಿಲ್ದಾಣಗಳನ್ನು ಯಾವಾಗ ನಿರ್ಮಿಸಲಾಗುವುದು; (ಪೂರ್ಣ ವಿವರ ನೀಡುವುದು) | ರಾಜ್ಯದಲ್ಲಿ ಶಿವಮೊಗ್ಗ, ವಿಜಯಪುರ, ಹಾಸನ, ರಾಯಚೂರು, ಬಳ್ಳಾರಿ, ದಾವಣಗೆರೆ ಮತ್ತು ಕೊಪ್ಪಳ ದಲ್ಲಿ ವಿಮಾನ ನಿಲ್ದಾಣಗಳನ್ನು ನಿರ್ಮಿಸಲು ಸ್ಥಳಗಳನ್ನು ಗುರುತಿಸಲಾಗಿದೆ.<br><br>ಶಿವಮೊಗ್ಗ, ವಿಜಯಪುರ ಮತ್ತು ಹಾಸನ ವಿಮಾನ ನಿಲ್ದಾಣಗಳ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿವೆ.<br><br>ರಾಯಚೂರು ವಿಮಾನ ನಿಲ್ದಾಣ ನಿರ್ಮಾಣದ ವಿಸ್ತೃತ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆಯ ನಂತರ ನಿರ್ಮಿಸಲು ಉದ್ದೇಶಿಸಿದೆ.<br><br>ಬಳ್ಳಾರಿ ವಿಮಾನ ನಿಲ್ದಾಣದ ಅಭಿವೃದ್ಧಿಗಾಗಿ (ಪಿಪಿಪಿ ಮಾದರಿಯಲ್ಲಿ) ಅಭಿವರ್ಧಕರನ್ನು ನೇಮಕ ಮಾಡಲಾಗಿದೆ.<br><br>ದಾವಣಗೆರೆ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ವಿಮಾನ ನಿಲ್ದಾಣಗಳನ್ನು ಸ್ಥಾಪಿಸಲು ಕಾರ್ಯಸಾಧ್ಯತಾ ವರದಿ ತಯಾರಿಸಲಾಗುತ್ತದೆ. |
| (ಆ) | ರಾಜ್ಯದಲ್ಲಿ ಈ ಪೈಕಿ ಭಾರತೀಯ ವಿಮಾನ ಪ್ರಾಧಿಕಾರದ (AAI) ಅಧೀನದಲ್ಲಿರುವ ವಿಮಾನ ನಿಲ್ದಾಣಗಳು ಮತ್ತು ರಾಜ್ಯ ಸರ್ಕಾರದ ಮೂಲಭೂತ ಸೌಕರ್ಯ ಅಭಿವೃದ್ಧಿ ಅಧೀನದಲ್ಲಿರುವ ವಿಮಾನ ನಿಲ್ದಾಣಗಳೆಷ್ಟು; | ರಾಜ್ಯದಲ್ಲಿ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ (AAI) ಅಧೀನದಲ್ಲಿರುವ ವಿಮಾನ ನಿಲ್ದಾಣದ ವಿವರಗಳು ಈ ಕೆಳಕಂಡಂತೆ ಇರುತ್ತವೆ.<br>1) ಮೈಸೂರು<br>2) ಹುಬ್ಬಳ್ಳಿ<br>3) ಬೆಳಗಾವಿ<br>4) ಕಲಬುರಗಿ |
| (ಇ) | ರಾಜ್ಯದಲ್ಲಿ ವಿವಿಧ ಜಿಲ್ಲೆಗಳಲ್ಲಿರುವ ವಾಯುನೆಲೆ (Air strip) ಗಳೆಷ್ಟು; ಅವುಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರ ರೂಪಿಸಿರುವ ಯೋಜನೆಗಳು ಯಾವುವು; (ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ವಿವಿಧ ಜಿಲ್ಲೆಗಳಲ್ಲಿ ಒಟ್ಟು 8 ವಾಯುನೆಲೆಗಳಿರುತ್ತವೆ. ಅವುಗಳ ವಿವರ ಈ ಕೆಳಕಂಡತಿರುತ್ತದೆ.<br><br>1. ಬಲ್ಡೋಟಾ (ಕೊಪ್ಪಳ).- ಖಾಸಗಿ ವಾಯುನೆಲೆಯಾಗಿದ್ದು, ಸದರಿ ವಿಮಾನ ನಿಲ್ದಾಣವು ಎರಡನೇ ಸುತ್ತಿನ ಪ್ರಾದೇಶಿಕ ಸಂಪರ್ಕ ಯೋಜನೆಯಲ್ಲಿ ಆಯ್ಕೆಯಾಗಿರುತ್ತದೆ. ಕೊಪ್ಪಳದಲ್ಲಿರುವ M/s. MSPL ಖಾಸಗಿ ಸಂಸ್ಥೆಯ ಒಡೆತನದಲ್ಲಿರುವ ಬಲ್ಡೋಟಾ ವಿಮಾನ ನಿಲ್ದಾಣವನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಉಪಯೋಗಿಸುವ ಕುರಿತು M/s. MSPL ಸಂಸ್ಥೆಯೊಂದಿಗೆ ಸರ್ಕಾರದ ವತಿಯಿಂದ ಹಲವಾರು ಪ್ರಯತ್ನಗಳನ್ನು ಮಾಡಿದ್ದರು ಸಹ, ಆರ್.ಸಿ.ಎಸ್ ವಿಮಾನಗಳ ಕಾರ್ಯಚಾರಣೆಗೆ M/s. MSPL ಸಂಸ್ಥೆಯಿಂದ ಸಕಾರಾತ್ಮಕ ಪ್ರತಿಕ್ರಿಯೆ ಬಂದಿರುವುದಿಲ್ಲ.<br><br>2. ಗಿಣಿಗೆರ (ಕೊಪ್ಪಳ) - ಸದರಿ ವಾಯುನೆಲೆಯು ಸುಮಾರು 35 ಎಕರೆ ಜಮೀನಿನಲ್ಲಿದ್ದು, ದಿನಾಂಕ: 18.03.2021 ರಂದು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರವು ಪರಿವೀಕ್ಷಣೆಯನ್ನು ಕೈಗೊಳ್ಳಲಾಗಿರುತ್ತದೆ. ಸದರಿ ವರದಿಯಂತೆ ಗಿಣಿಗೆರ ವಾಯುನೆಲೆ ವಿಸ್ತರಣೆಯನ್ನು ಕೈಗೊಳ್ಳಲು ಕಾರ್ಯಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| | | 3. ಭಾರತೀಯ ವಿಜ್ಞಾನ ಸಂಸ್ಥೆ, (ಬೆಂಗಳೂರು) – ಈ ವಾಯುನೆಲೆಯನ್ನು ಸಣ್ಣ ಡ್ರೋನ್‌ಗಳ ಪರೀಕ್ಷೆಗಳ ಕಾರ್ಯಗಳಿಗೆ ಉಪಯೋಗಿಸಲಾಗುತ್ತಿದೆ.<br>4. ಜಕ್ಕೂರು (ಬೆಂಗಳೂರು) - ಈ ವಾಯುನೆಲೆಯು ರಾಜ್ಯ ಸರ್ಕಾರದ ಅಧೀನದಲ್ಲಿದ್ದು, ವಾಯು ತರಬೇತಿಗಾಗಿ ಉಪಯೋಗಿಸಲಾಗುತ್ತಿದೆ.<br>5. ಬಳ್ಳಾರಿ – ಬಳ್ಳಾರಿ ವಾಯುನೆಲೆಯು ರಕ್ಷಣಾ (Defence) ವಿಮಾನ ಇಳಿದಾಣವಾಗಿರುತ್ತದೆ.<br>6. ಚಿಕ್ಕಮಗಳೂರು – ಚಿಕ್ಕಮಗಳೂರಿನಲ್ಲಿ ಸುಮಾರು 100 ಎಕರೆ ಜಮೀನಿನಲ್ಲಿ ವಾಯುನೆಲೆಯನ್ನು ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿರುತ್ತದೆ. ಸದರಿ ವಾಯುನೆಲೆಯಲ್ಲಿ ಸುಮಾರು 500 ಮೀ ಕಟ್ಟ ರನ್ವೇ ಇರುತ್ತದೆ.<br>7. ಹರಿಹರ – ಖಾಸಗಿ ವಾಯುನೆಲೆಯಾಗಿರುತ್ತದೆ.<br>8. ಕೋಲಾರ - ಕೋಲಾರ ವಾಯುನೆಲೆಯು ರಕ್ಷಣಾ (Defence) ವಿಮಾನ ಇಳಿದಾಣವಾಗಿರುತ್ತದೆ. |
| (ಈ) | ಮೂಲಭೂತ ಸೌಕರ್ಯ ಇಲಾಖೆ ಅಡಿಯಲ್ಲಿ ಬೆಂಗಳೂರಿನ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೊಂದಿಕೊಂಡಂತೆ ಸ್ಥಾಪಿಸಲಾಗುವ ಅಂತರ ರಾಷ್ಟ್ರೀಯ ಸಮಾವೇಶ ಕೇಂದ್ರ ಮತ್ತು ವ್ಯಾಪಾರ/ವಹಿವಾಟು ಕೇಂದ್ರಗಳು ಯಾವ ಹಂತದಲ್ಲಿದೆ; ಇವುಗಳು ಪೂರ್ಣಗೊಳ್ಳುವುದು ಯಾವಾಗ? (ಪೂರ್ಣ ಮಾಹಿತಿ ನೀಡುವುದು) | ರಾಜ್ಯ ಸರ್ಕಾರವು ಅಂತರಾಷ್ಟ್ರೀಯ ಸಮಾವೇಶ ಕೇಂದ್ರ ಮತ್ತು ಬೆಂಗಳೂರು ಸಿಗ್ನೇಚರ್ ಬ್ಯುಸಿನೆಸ್ ಪಾರ್ಕ್‌ಅನ್ನು ಅಭಿವೃದ್ಧಿಪಡಿಸಲು ದಿನಾಂಕ: 04/12/2017 ರಂದು ಆದೇಶವನ್ನು ಹೊರಡಿಸಿತ್ತು. ಸದರಿ ಆದೇಶದಂತೆ ಅಂತರಾಷ್ಟ್ರೀಯ ಸಮಾವೇಶ ಕೇಂದ್ರ (MICE- Meetings, Incentives, Conventions and Exhibitions) ವನ್ನು ಸುಮಾರು 35 ಎಕರೆ ಪ್ರದೇಶದಲ್ಲಿ ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿ ಪಡಿಸಲು ಕೆಎಸ್‌ಐಐಡಿಸಿಯು 2018 ರಲ್ಲಿ ಟೆಂಡರ್ ಅನ್ನು ಆಹ್ವಾನಿಸಿದ್ದು, ಸದರಿ ಟೆಂಡರ್‌ನಲ್ಲಿ ಯಾವುದೇ ಅಭಿವೃದ್ಧಿದಾರರು ಭಾಗವಹಿಸಿರುವುದಿಲ್ಲ. ತದನಂತರ, ಬಿ.ಐ.ಎ.ಎಲ್ ಸಂಸ್ಥೆಯು ಈ ಯೋಜನೆಯನ್ನು ಕೈಗೆತ್ತಿಕೊಂಡಿರುವುದರಿಂದ ರಾಜ್ಯ ಸರ್ಕಾರವು ಈ ಯೋಜನೆಯನ್ನು ಕೈಬಿಡಲು ದಿನಾಂಕ: 10/02//2020 ರಂದು ಉನ್ನತಾಧಿಕಾರಿಗಳ ಸಮಿತಿ (Empowered Committee) ಸಭೆಯಲ್ಲಿ ನಿರ್ಧರಿಸಲಾಗಿದೆ.<br><br>ಬೆಂಗಳೂರು ಸಿಗ್ನೇಚರ್ ಬ್ಯುಸಿನೆಸ್ ಪಾರ್ಕ್‌ಅನ್ನು 407 ಎಕರೆಯಲ್ಲಿ ಅಭಿವೃದ್ಧಿಪಡಿಸಲಾಗುತ್ತಿದ್ದು. ಮೂಲಸೌಕರ್ಯದ ಮೊದಲ ಹಂತದ (Trunk Infrastructure) ಕೆಲಸಗಳು ಪ್ರಗತಿಯಲ್ಲಿರುತ್ತದೆ. |

ಸಂಖ್ಯೆ: ಮೂಅಇ 33 ರಾಅವಿ 2022

**(ವಿ. ಸೋಮಣ್ಣ)**
ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ,
ಸಚಿವರು